# ಶ್ರೀರಾಮನು ಯಾರು? ಈಶ್ವರನೋ ಅಥವಾ ಮಾನವನೋ?

ಸ್ವಾಮಿ ಮುಕ್ತಿಪದಾನಂದ

ಶ್ರೀರಾಮನ ನರಲೀಲೆ ಹಾಗೂ ಭಗವದಂಶಗಳನ್ನು ಶ್ರೀ ತುಲಸೀದಾಸರ 'ಶ್ರೀರಾಮಚರಿತಮಾನಸ'ದಲ್ಲಿನ ಪ್ರಸಂಗ ಗಳಿಂದ ವ್ಯಾಖ್ಯಾನಿಸಿರುವ ಲೇಖಕರು ಮಂಗಳೂರಿನ ರಾಮಕೃಷ್ಣ ಮಠದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಾರ್ಚ್ ೨೭ ರಂದು ಶ್ರೀರಾಮನವಮಿ. ಈ ಪ್ರಯುಕ್ತ ಆ ಮರ್ಯಾದಾ ಪುರುಷೋತ್ತಮನ ಚಿಂತನೆಯಿಂದ ಧನ್ಯರಾಗೋಣ.

ಮಹರ್ಷಿ ವಾಲ್ಮೀಕಿಯು ಮೂಲತಃ ಭಗವಾನ್ ಶ್ರೀರಾಮನ ವರ್ಣನೆಯನ್ನು ಆದರ್ಶ ಮಾನವನ ರೂಪದಲ್ಲಿ ಚಿತ್ರಿಸಿರುವರು. 'ಶ್ರೀರಾಮಚರಿತ ಮಾನಸ'ದಲ್ಲಿ ತುಲಸೀದಾಸರ ಮೂಲ ಪ್ರಶ್ನೆ ಏನೆಂದರೆ: "ಶ್ರೀರಾಮನು ಈಶ್ವರನೊ? ಅಥವಾ ಕೇವಲ ಮಾನವನೊ?" ಇದಕ್ಕೆ ಉತ್ತರವಾಗಿ ಶ್ರೀರಾಮನ ಚರಿತ್ರೆಯನ್ನು ಸಂವಾದರೂಪದಲ್ಲಿ ನಿರೂಪಿಸಿದರು. ಒಂದು ಕಡೆಯಲ್ಲಿ ಭಗವಾನ್ ಶಂಕರ ಮತ್ತು ಪಾರ್ವತಿ, ಇನ್ನೊಂದು ಕಡೆಯಲ್ಲಿ ಕಾಕಭುಶುಂಡಿ ಮತ್ತು ಗರುಡ, ಮತ್ತೊಂದು ಕಡೆಯಲ್ಲಿ ಮಹರ್ಷಿ ಯಾಜ್ಞವಲ್ಕ್ಯ ಮತ್ತು ಭಾರದ್ವಾಜ ಮುನಿಗಳು—ಇವರೇ ಶ್ರೀರಾಮಚರಿತ ಮಾನಸದ ಕಥೆಯನ್ನು ಹೇಳುವ-ಕೇಳುವ ಪಾತ್ರಗಳು.

ಈ ಮೂವರು ಶ್ರೋತೃಗಳ ಮನಸ್ಸಿನಲ್ಲಿಯೂ ಪ್ರಶ್ನೆ ಒಂದೇ ಆಗಿರುತ್ತದೆ. ಪಾರ್ವತಿಯ ಪ್ರಶ್ನೆ: "ಪರಬ್ರಹ್ಮನು ಮನುಷ್ಯರೂಪದಲ್ಲಿ ಅವತರಿಸಲು ಸಾಧ್ಯವೆ? ಶ್ರೀರಾಮನು ಈಶ್ವರನೆ?" ಇದೇ ಪ್ರಶ್ನೆಯನ್ನು ಗರುಡನು ಕಾಕಭುಶಂಡಿಗೆ ಕೇಳುತ್ತಾನೆ. ಲಂಕೆಯ ರಣರಂಗದಲ್ಲಿ ಇಂದ್ರಜಿತ್ತಿನ ನಾಗಪಾಶದಿಂದ ಬಂಧಿತನಾದ ಶ್ರೀರಾಮನನ್ನು ನೋಡಿ ಗರುಡನಿಗೆ ಸಂಶಯವಾಗುತ್ತದೆ—"ಅರೆ! ಇವನಾದರೋ ಸಾಧಾರಣ ವ್ಯಕ್ತಿಯೇ ಅಲ್ಲವೇ?" ಮತ್ತೆ ಇದೇ ಪ್ರಶ್ನೆಯನ್ನು ಭಾರದ್ವಾಜರು ಯಾಜ್ಞವಲ್ಕ್ಯರಿಗೆ ಕೇಳುತ್ತಾರೆ—"ಯಾವಾತನನ್ನು ಇಷ್ಟು ಪ್ರಶಂಸಿಸುತ್ತಿರುವಿರೋ, ಈ ರಾಮನು ಯಾರೆಂದು ಕೃಪೆಯಿಟ್ಟು ತಿಳಿಸಿರಿ." ಯಾಜ್ಞವಲ್ಕ್ಯರು ವ್ಯಂಗ್ಯವೆಂಬಂತೆ, ರಾಮನ ಐತಿಹಾಸಿಕ ವರ್ಣನೆಯನ್ನು ಕೇವಲ ಎರಡು ಮೂರು ಪಂಕ್ತಿಗಳಲ್ಲೇ ಮಾಡಿ ಸಮಾಪ್ತಿ ಮಾಡುತ್ತಾರೆ.

ಏಕ ರಾಮ ಅವಧೇಸ ಕುಮಾರಾ ।
ತಿನ್ಹ ಕರ ಚರಿತ ಬಿದಿತ ಸಂಸಾರಾ ॥ (೧.೪೫, ೪)

"ರಾಮನು ಅಯೋಧ್ಯೆಯ ಒಬ್ಬ ರಾಜಕುಮಾರನಾಗಿದ್ದನು ಮತ್ತು ಅವನ ಚರಿತ್ರೆಯು ಜಗತ್ತಿನಲ್ಲಿ ಬಹು ಪ್ರಸಿದ್ಧವಾಗಿದೆ." ಏಕೆಂದರೆ,

ನಾರಿ ಬಿರಹ ದುಖು ಲಹೇಉ ಅಪಾರಾ ।
ಭಯಉ ರೋಷು ರನ ರಾವನು ಮಾರಾ ॥ (೧.೪೫,೪)

"ಪತ್ನಿವಿಯೋಗದಿಂದ ತುಂಬ ದುಃಖವಾಯಿತು, ಅವನು ತುಂಬ ಅತ್ತನು ಮತ್ತು ಅನಂತರ ಅವನಿಗೆ ತುಂಬಾ ಕೋಪ ಬಂದುದರಿಂದ ರಾವಣನನ್ನು ಕೊಂದನು."

ಪ್ರಸಿದ್ಧವಾದ ರಾಮನ ಚರಿತ್ರೆಯನ್ನು, ಅದು ಯಾರಾದರೂ ಕೇಳಿದಾಗ, ಇಷ್ಟು ಸಂಕ್ಷಿಪ್ತವಾಗಿ ಹೇಳಿದರೆ, ಅದು ವ್ಯಂಗ್ಯವಲ್ಲವೇ? ರಾಮನಲ್ಲಿ ಹೇಳುವಂತಹ ವಿಶೇಷತೆ ಏನಿದೆ? ಯಾರಿಗೆ ತಾನೇ ತನ್ನ ಪ್ರಿಯತಮೆಯ ವಿಯೋಗದಿಂದ ದುಃಖವಾಗುವುದಿಲ್ಲ? ಮತ್ತು ಯಾವ ವ್ಯಕ್ತಿಯು ತನ್ನಲ್ಲಿ ಶಕ್ತಿ ಸಾಮರ್ಥ್ಯಗಳಿದ್ದು ತನ್ನ ಪ್ರಿಯವಸ್ತುವನ್ನು ಪಡೆಯಲು ಹೆಣಗುವುದಿಲ್ಲ? ಇಂತಹ ಸ್ಥಿತಿಯಲ್ಲಿ, ಒಂದು ವೇಳೆ ಶ್ರೀರಾಮನು ತನ್ನ ಪತ್ನಿಯನ್ನು ಪಡೆಯಲು ರಾವಣನೊಡನೆ ಕಾದಾಡಿ ಜಯ ಗಳಿಸಿದ್ದರೆ ಅದಕ್ಕೆ ವಿಶೇಷ ಮಹತ್ವವನ್ನು ಏಕೆ ಕೊಡಬೇಕು? ಇದರೊಡನೆಯೇ ಭಾರದ್ವಾಜರು ಮತ್ತೆ ಕೇಳುತ್ತಾರೆ: "ಯಾವ ಶ್ರೀರಾಮನ ನಾಮವನ್ನು ಭಗವಾನ್ ಶಂಕರನೂ ಜಪಿಸುತ್ತಾನೋ ಅವನು ಈ ಅಯೋಧ್ಯೆಯ ರಾಜಪುತ್ರನೊ ಅಥವಾ ಬೇರೆಯವನೊ?" ಇದರ ಉತ್ತರರೂಪದಲ್ಲಿರುವುದೆ ರಾಮಕಥೆ.

ಉತ್ತರಕಾಂಡದ ಅಂತ್ಯದಲ್ಲಿ ಒಂದು ಚಿತ್ರಣವಿದೆ. ಕಾಕಭುಶುಂಡಿ ಶ್ರೀರಾಮನೊಡನೆ ಆಡುತ್ತಲಿದ್ದಾನೆ. ಆಡುತ್ತಿದ್ದ ಶ್ರೀರಾಮನ ಲೀಲೆಗಳನ್ನು ನೋಡಿ ಅವನಿಗೆ ಭ್ರಮೆಯಾಯಿತು. ಆಗ ಕೌಸಲ್ಯೆಯು ಮಾಲಪುವಾವನ್ನು (ಅತಿರಸದಂತಹ ಸಿಹಿ ತಿಂಡಿ) ತಂದು ಶ್ರೀರಾಮನ ಕೈಯಲ್ಲಿ ಕೊಟ್ಟಳು. ಶ್ರೀರಾಮನು ಅದನ್ನು ತಿನ್ನತೊಡಗಿದನು. ತನಗೂ ಪ್ರಸಾದ ಸಿಕ್ಕೀತು ಎಂದು ಯೋಚಿಸಿ ಕಾಕಭುಶುಂಡಿ ಶ್ರೀರಾಮನ ಬಳಿ ಸಾರಿದ. ಶ್ರೀರಾಮನು ತನಗೆ ಆ ತಿಂಡಿಯ ಕೊಂಚ ಭಾಗವನ್ನಾದರೂ ಕೊಡಲಿ ಎಂಬ ಆಶೆ ಅವನಿಗಿದ್ದರೂ ಬಾಲಕ ಶ್ರೀರಾಮ ಕೊಡಲಿಲ್ಲ. ಇಲ್ಲವೆನ್ನುತ್ತ ಕೈಯನ್ನು ಆಡಿಸಿದನು. ಯಾವಾಗ ಬೇಸರಗೊಂಡು ಕಾಕಭುಶುಂಡಿ ಕೋಪಿಸಿಕೊಂಡು ದೂರ ಸರಿದನೋ, ಆಗ ಶ್ರೀರಾಮನು ಅವನಿಗೆ ಪುನಃ ತಿಂಡಿಯನ್ನು ತೋರಿಸಿದ. ಮತ್ತೆ ಆಸೆಯಾಗಿ ಕಾಕಭುಶುಂಡಿ ತಿಂಡಿ ತೆಗೆದುಕೊಳ್ಳಲು ಬಂದಾಗ ಪುನಃ ಕೈಯನ್ನು ಹಿಂದೆಗೆದುಕೊಂಡ. ಆಗ ಕಾಕಭುಶುಂಡಿ ಹೇಳುತ್ತಾನೆ:

ಪ್ರಾಕೃತ ಸಿಸು ಇವ ಲೀಲಾ ದೇಖಿ ಭಯಉ ಮೋಹಿ ಮೋಹ ।
ಕವನ ಚರಿತ್ರ ಕರತ ಪ್ರಭು ಚಿದಾನಂದ ಸಂದೋಹ [೭.೭೭ (ಖ)]

"ಸಚ್ಚಿದಾನಂದಘನನಾದ ಈ ಪ್ರಭುವು ಸಾಧಾರಣ ಬಾಲಕ ರಂತೆ ಲೀಲೆಯನ್ನು ಪ್ರದರ್ಶಿಸುತ್ತಿರುವನಲ್ಲ!" ಎಂದು ನನಗೆ ಭಯವೂ, ಪ್ರೀತಿಯೂ ಉಂಟಾಯಿತು.

ಶ್ರೀರಾಮನು ಲೀಲೆಯನ್ನು ತೋರುತ್ತಿದ್ದನಾದರೂ ನಾನು ಲೀಲೆ ಎಂದು ತಿಳಿಯದೆ ಚರಿತ್ರೆಯನ್ನು ನೋಡತೊಡಗಿದ್ದೆ. ಶ್ರೀರಾಮನು ಬಾಲಕನ ನಟನೆಯನ್ನು ಮಾಡುತ್ತಿದ್ದನು. ಅದು ಹೇಗೆ ಇಷ್ಟು ಸುಲಭವಾಗಿ ಒಬ್ಬ ಬಾಲಕ, ಕಾಗೆಗೆ ತಿಂಡಿಯನ್ನು ಕೊಡುವನು? ಶ್ರೀರಾಮನು ಅಭಿನಯವನ್ನು ಸರಿಯಾಗಿಯೇ ಮಾಡಿದ್ದನು. ಆದರೆ ಕಾಕಭುಶುಂಡಿಗೆ ತೋರಿದ್ದೇನೆಂದರೆ, ಈಶ್ವರ ನಾದರೋ ತುಂಬ ಉದಾರನೆಂದು ಹೇಳುವರು. ಆದರೆ ತಿಂಡಿ ಕೊಡುವಲ್ಲಿಯೂ ಕೃಪಣತೆಯನ್ನು ಮಾಡಿದರೆ, ಅವನು ಹೇಗೆ ಈಶ್ವರನಾಗಲು ಸಾಧ್ಯ? ಕಾಕಭುಶುಂಡಿ ಗರುಡನೊಡನೆ ಹೇಳು ತ್ತಾನೆ, "ಇದರಿಂದಾಗಿ ನನ್ನ ಮನಸ್ಸು ಭ್ರಮೆಯಲ್ಲಿ ಸಿಲುಕಿತು ಮತ್ತು ನಾನು ಶ್ರೀರಾಮನಿಂದ ದೂರ ಹಾರಿಹೋದೆ."

ತಬ ಮೈ ಭಾಗಿ ಚಲೇಉ ಉರಗಾರೀ ।
ರಾಮ ಗಹನ ಕಹ ಭುಜಾ ಪಸಾರೀ ॥
ಜಿಮಿ ಜಿಮಿ ದೂರ ಉಡಾಉ ಅಕಾಸಾ ।
ತಹ ಭುಜ ಹರಿ ದೇಖಉ ನಿಜ ಪಾಸಾ ॥ (೭೭೮.೪)

"ನಾನು ಹಾರಲು ತೊಡಗಿದೆ ಮತ್ತು ಶ್ರೀರಾಮನು ನನ್ನನ್ನು ಹಿಡಿಯಲು ಭುಜಗಳನ್ನು ಚಾಚಿದನು. ಆಕಾಶದಲ್ಲಿ ಎಲ್ಲೆಲ್ಲಿಗೆ ನಾನು ಹಾರಿದರೂ ಅಲ್ಲೆಲ್ಲಾ ಶ್ರೀರಾಮನ ಭುಜಗಳು ನನ್ನ ಹತ್ತಿರವೇ ಬರುತ್ತಿದ್ದವು.

ಬ್ರಹ್ಮಲೋಕ ಲಗಿ ಗಯಉ ಮೈ ಚಿತಯಉ ಪಾಛ ಉಡಾತ ।
ಜುಗ ಅಂಗುಲ ಕರ ಬೀಚ ಸಬ ರಾಮ ಭುಜಹಿ ಮೋಹಿ ತಾತ॥
[೭–೭೯(ಕ)–೪ ೭೯]

"ನಾನು ಎಲ್ಲಿಗೇ ಹೋಗಲಿ, ಬ್ರಹ್ಮಲೋಕಕ್ಕೆ ಹೋದಾಗಲೂ ಹಿಂದಿರುಗಿ ನೋಡಿದಾಗ ಶ್ರೀರಾಮನ ಭುಜಕ್ಕೂ ನನಗೂ ಎರಡೇ ಅಂಗುಲಗಳ ವ್ಯತ್ಯಾಸವಿತ್ತು. ಮತ್ತು ಆಗ ವ್ಯಾಕುಲ ನಾಗಿ ಕಣ್ಣುಗಳನ್ನು ಮುಚ್ಚಿಕೊಂಡೆ. ಯಾವಾಗ ಕಣ್ಣು ತೆರೆ ದೆನೋ ಆಗ ಬಂದು ರಾಮನ ಚರಣಗಳಲ್ಲಿ ಬಿದ್ದೆ. ಯಾವಾಗ ನಾನು ಆತನ ಚರಣಗಳಲ್ಲಿ ಬಿದ್ದೆನೋ, ಆಗ ಶ್ರೀರಾಮನು ಮುಗುಳ್ನಗುತ್ತಿದ್ದನು. ಮತ್ತು ಥಕ್ಕನೆ ನನ್ನನ್ನು ತನ್ನ ಬಾಯೊಳಗೆ ಹಾಕಿಕೊಂಡನು! ಯಾವಾಗ ಭಗವಂತನ ಮಡಿಲನ್ನು ಸೇರಿ ದೆನೋ, ಅವನ ಉದರದಲ್ಲಿ ಕೋಟಿ ಕೋಟಿ ಬ್ರಹ್ಮಾಂಡಗಳ ದರ್ಶನವನ್ನು ಮಾಡಿದೆ." ಕಾಕಭುಶುಂಡಿಯು ಹೇಳುತ್ತಾನೆ: "ನಾನು ಕಂಡ ವಿಚಿತ್ರವೆಂದರೆ ನಾನೆಲ್ಲೆಲ್ಲಿಗೆ ಹೋದೆನೋ, ಆ ಪ್ರತಿಯೊಂದು ಬ್ರಹ್ಮಾಂಡದಲ್ಲೂ ಶ್ರೀರಾಮನ ಅವತಾರವನ್ನು ನೋಡಿದೆ. ಅಷ್ಟೇ ಅಲ್ಲ, ಪ್ರತಿಯೊಂದು ಸ್ಥಳದಲ್ಲಿಯೂ ಕಾಕ ಭುಶುಂಡಿಯೂ ಕುಳಿತಿರುವುದನ್ನು ನೋಡಿ ಆಶ್ಚರ್ಯ ವಾಯಿತು. ಪ್ರತಿ ಬ್ರಹ್ಮಾಂಡದಲ್ಲಿ ದಶರಥನಿದ್ದಾನೆ, ಕೌಸಲ್ಯೆ ಇದ್ದಾಳೆ, ರಾಮನಾದರೊ ಪ್ರತಿ ಸ್ಥಳದಲ್ಲಿ ಅವನೇಯೇ. ಆದರೆ ದಶರಥ, ಕೌಸಲ್ಯೆ, ಕಾಕಭುಶುಂಡಿಯರೆಲ್ಲ ಬೇರೆ ಬೇರೆ ಆಗಿರು ತ್ತಾರೆ." ಅವನು ೧೦೧ ಕಲ್ಪಗಳ ತನಕ ಭಗವಾನ್ ಶ್ರೀರಾಮನ ಲೀಲೆಯ ದರ್ಶನವನ್ನು ಅಗಣಿತ ಬ್ರಹ್ಮಾಂಡಗಳಲ್ಲಿ ಮಾಡಿದ! ಯಾವಾಗ ಅವನು ಬ್ರಹ್ಮಾಂಡಗಳನ್ನು ನೋಡುತ್ತಾ ನೋಡುತ್ತಾ ಭಯಗೊಂಡನೊ ಆಗ ಥಕ್ಕನೆ ಭಗವಂತನು ನಗಲಾರಂಭಿಸಿದ ಮತ್ತು ಕಾಕಭುಶುಂಡಿಯು ಶ್ರೀರಾಮನ ಬಾಯಿಂದ ಹೊರಗೆ ಬಂದುಬಿಟ್ಟ. ಆಗ ಅವನಿಗೆ ತೋರಿದ್ದೇನೆಂದರೆ—

ಉಭಯ ಘರೀ ಮಹ ಮೈ ಸಬ ದೇಖಾ । [೭–೮೧(ಖ)–೪]

"ನಾನು ಎರಡು ಗಳಿಗೆಗಳಲ್ಲಿ ಎಲ್ಲವನ್ನೂ ನೋಡಿದೆ, ರಾಮನ ಉದರದಲ್ಲಿ ೧೦೧ ಕಲ್ಪಗಳ ಕಾಲ ಭ್ರಮಣ ಮಾಡಿ ದವನಂತೆ ತೋರಿತು."

ಇದರ ಅಭಿಪ್ರಾಯವೇನು? ದೇಶ ಮತ್ತು ಕಾಲಗಳು ಸಾಪೇಕ್ಷ ವಾದುವು. ದೇಶ ಮತ್ತು ಕಾಲವನ್ನು ವ್ಯಕ್ತಿಯು ಕೇವಲ ಆಂಶಿಕ ವಾಗಿ ತಿಳಿಯಬಲ್ಲ ಎಂಬ ಒಂದು ಹೊಸ ಸತ್ಯ ಕಾಕ ಭುಶುಂಡಿಯ ಅರಿವಿಗೆ ಬಂತು. ಒಂದೊಂದು ಬ್ರಹ್ಮಾಂಡ ದಲ್ಲಿಯೂ ಭಗವಂತನ ಅವತಾರವಾಗುವುದೆಂದು ತುಲಸೀ ದಾಸರು ಹೇಳಿಯಾಗಿದೆ. ಅವರು ಎರಡು ಪರಿಭಾಷೆಗಳನ್ನು ಮಾಡಿರುವರು. **ಬ್ರಹ್ಮಾಂಡ** ಮತ್ತು **ಪಿಂಡಾಂಡ**. ಯಾವುದು ವಿರಾಟ್ ಬ್ರಹ್ಮಾಂಡವೊ, ಅದರ ಒಂದು ಸಣ್ಣ ಪ್ರತಿರೂಪ ವ್ಯಕ್ತಿಯ ಪಿಂಡಾಂಡ. ಗೋಸ್ವಾಮಿಜಿಯವರು ಹೇಳುತ್ತಾರೆ: "ಕಲ್ಪದ ಕಲ್ಪನೆಯು ನಿಮ್ಮ ಮನಸ್ಸಿನ ವ್ಯಾಕುಲತೆಯ ಅನುಭೂತಿ ಯೊಡನೆ ಸಂಬಂಧಿಸಿದೆ. ಅದು ಯಾವುದೊಂದು ಬಾಹ್ಯ ಗಡಿಯಾರದೊಂದಿಗೆ ಸಂಬಂಧಿಸಿಲ್ಲ. ಒಂದು ವೇಳೆ ಅದು ಗಡಿಯಾರದೊಂದಿಗೆ ಸಂಬಂಧಿಸಿದ್ದೇ ಆದರೆ ನಾವು ಭಗವಂತ ನನ್ನು ಪಡೆಯಲು ಶಕ್ಯರಾಗುವುದೇ ಇಲ್ಲ. ವ್ಯಾಕುಲತೆಯಿದ್ದರೆ ಈ ತ್ರೇತಾಯುಗ ಮುಂತಾದ ಕಲ್ಪಗಳೂ ಕೂಡ ನಮ್ಮ ಈ ಜೀವನದಲ್ಲಿಯೇ ಬರಲು ಸಾಧ್ಯವಿದೆ."

'ರಾಮಚರಿತ ಮಾನಸ'ದಲ್ಲಿ ಒಂದು ಸ್ವಾರಸ್ಯವಾದ ಪ್ರಸಂಗ ಬರುತ್ತದೆ. ಶ್ರೀರಾಮಚಂದ್ರನು ಹನುಮಂತನನ್ನು ಕೇಳುತ್ತಾನೆ, "ಹನುಮಂತ, ಸೀತೆ ಲಂಕೆಯಲ್ಲಿ ಹೇಗಿದ್ದಾಳೆ?" ಹನು ಮಂತನು ಉತ್ತರಿಸಿದ: "ಪ್ರಭು, ನೀವು ಇದರ ಬಗ್ಗೆ ಏನನ್ನೂ ಕೇಳಬೇಡಿ. ಸಾವಿರಾರು ಕಲ್ಪಗಳಲ್ಲಿ ಅನುಭವಿಸಬಹುದಾದ ಅಸಾಧ್ಯ ಯಾತನೆಯನ್ನು ಆಕೆ ಅನುಭವಿಸುತ್ತಿರುವಳು." ಭಗವಂತನು ಹೇಳುತ್ತಾನೆ—"ಇದೆಂತಹ ಮಾತು! ಕೇವಲ ಹತ್ತು ತಿಂಗಳಿಂದ ಸೀತೆ ಲಂಕೆಯಲ್ಲಿ ಇದ್ದಾಳೆ." ಹನುಮಂತ ಹೇಳಿದ— "ಇಲ್ಲ ಪ್ರಭು. ನೀವು ಹೇಳಿದ್ದು ಸರಿಯಲ್ಲ, ಕೇವಲ ಹತ್ತು ತಿಂಗಳಿನಿಂದ ಸೀತೆ ಲಂಕೆಯಲ್ಲಿ ಇರುವಳೆಂದಾದರೆ ನೀವು ಸರಿಯಾಗಿ ಲೆಕ್ಕ ಹಾಕಿದಂತಿಲ್ಲ!



ನಿಮಿಷ ನಿಮಿಷ ಕರುನಾನಿಧಿ ಜಾಹಿಂ ಕಲಪ ಸಮ ಬೀತಿ ।
(೫-೩೧)

"ಸೀತೆಯ ಜೀವನದಲ್ಲಿ ಈಗ ಎಷ್ಟು ವ್ಯಾಕುಲತೆ ಇದೆ ಎಂದರೆ ಆಕೆಗೆ ಒಂದೊಂದು ನಿಮಿಷವೂ ಕಲ್ಪದಂತೆ ಕಳೆಯುತ್ತದೆ. ಆಕೆ ಅಸಹಾಯಕಳಾಗಿ ಪರಿತಪಿಸುತ್ತಿದ್ದಾಳೆ. ಪ್ರತಿ ಕಲ್ಪದಲ್ಲಿ ಅವತಾರವೆತ್ತಿ ಬರುವೆನೆಂದು ಮಾಡಿದ ನಿಮ್ಮ ಪ್ರತಿಜ್ಞೆಯನ್ನು ನೀವು ಮರೆತಿರುವಿರೆಂದು ತೋರುತ್ತದೆ.".

ಹನುಮಂತನ ಅಭಿಪ್ರಾಯವೇನೆಂದರೆ ವ್ಯಾಕುಲತೆಯ ಯಾತನೆಯಲ್ಲಿ ಪ್ರತಿ ವ್ಯಕ್ತಿಯೂ ಕಲ್ಪಗಳನ್ನೇ ಕಳೆಯುವ ಸಾಧ್ಯತೆಯಿದೆ.

ಈ ರೀತಿಯಲ್ಲಿ ತುಲಸೀದಾಸರು ಶ್ರೀರಾಮನನ್ನು ನಮ್ಮ ಸಮೀಪಕ್ಕೆ ತಂದುಬಿಟ್ಟಿರುವ ಹಾಗೆ ಕಾಣುತ್ತದೆ. ಕಾಲದ ಪರಿಚ್ಛೇದವನ್ನು ಅವರು ದೂರ ಮಾಡಿರುವರು. ಪ್ರತಿಯೊಬ್ಬ ವ್ಯಕ್ತಿಯ ಶರೀರ, ಅವನ ಜೀವನ ಒಂದೊಂದು ಬ್ರಹ್ಮಾಂಡದಂತೆ, ಮತ್ತು ಇದಕ್ಕಾಗಿಯೇ ರಾಮಾಯಣದ ಆರಂಭದಲ್ಲಿಯೇ ಭಗವಾನ್ ಶ್ರೀರಾಮನ ಅವತಾರದ ಕೆಲವು ವಿವರಗಳನ್ನು ತುಳಸೀದಾಸರು ವರ್ಣಿಸಿರುವರು.

ರಾವಣ ಕುಂಭಕರ್ಣರು ಯಾರೆಂಬ ಬಗ್ಗೆ ಮೂರು ರೀತಿಯ ವಿವರ ನೀಡುತ್ತಾರೆ: ಭಗವಾನ್ ವಿಷ್ಣುವಿನ ದ್ವಾರಪಾಲಕರಾದ ಜಯ ಮತ್ತು ವಿಜಯರು ಭಗವಂತನ ಸಂಗಡಿಗರು. ನೋಡಲು ಭಗವಂತನಂತೆಯೇ ಇದ್ದರು. ಸನಕ, ಸನಂದನ, ಸನಾತನ, ಸನತ್ಕುಮಾರ ಎಂಬ ಋಷಿಗಳು ಭಗವಂತನ ದರ್ಶನಕ್ಕೆ ಬಂದಾಗ ಅವರನ್ನು ಒಳಗೆ ಹೋಗಲು ಬಿಡದೆ ಅವರನ್ನು ಬೆತ್ತದಿಂದ ತಡೆಯುತ್ತಾರೆ. ತಮ್ಮ ಮನಸ್ಸಿನಲ್ಲಿ, "ನಾವು ಭಗವಂತನಂತೆಯೇ ಇರುವೆವು. ನಮ್ಮ ದರ್ಶನವನ್ನು ಮಾಡಿ ಏಕೆ ಇವರು ಸಂತುಷ್ಟರಾಗಬಾರದು" ಎಂಬ ದುರಹಂಕಾರ ಅವರಲ್ಲಿ ತಲೆದೋರಿತು. ಆಗ ಆ ಮಹಾತ್ಮರು ಕುಪಿತರಾಗಿ, ನೀವು ಮೂರು ಜನ್ಮಗಳಲ್ಲಿ ಅಸುರರಾಗಿ ಜನಿಸಬೇಕಾಗುವುದು ಎಂದು ಶಾಪವನ್ನು ಕೊಟ್ಟರು. ಫಲಸ್ವರೂಪವಾಗಿ ಆ ದ್ವಾರಪಾಲಕರು ರಾವಣ ಕುಂಭಕರ್ಣರಾಗಿ ಬಂದರು ಎಂಬುದು ಪ್ರಸಿದ್ಧವಾದ ಕಥೆ. ಒಳಗಡೆ ಯಾರ ದರ್ಶನವನ್ನು ಪಡೆಯಲು ಅವರು ಹೋಗುತ್ತಿದ್ದರೊ, ಆತನಲ್ಲಿ ಏನಾದರೂ ವಿಶೇಷತೆ ಇದೆಯೇ? ಇವರಿಂದ ಬಂದ ರಾವಣನು ಅಹಂಕಾರದ ಪ್ರತೀಕನಾಗಿರುವನು. ಅಥವಾ ಭಗವಂತನೊಡನೆ ಸ್ಪರ್ಧಿಸುವ ಭಾವನೆಯಿದ್ದವನು.

ಶಂಕರನ ರುದ್ರಗಣಗಳು ರಾವಣ ಕುಂಭಕರ್ಣರಾಗಿ ಹುಟ್ಟಿದ್ದರೆನ್ನಲಾಗಿದ್ದ ಪ್ರಸಂಗದಲ್ಲಿ ಈ ರಾಕ್ಷಸೀ ಪ್ರವೃತ್ತಿಯು ಬೇರೆ ರೀತಿಯಲ್ಲಿ ಕಾರ್ಯನಿರತವಾಗಿದ್ದುದು ಕಾಣುತ್ತದೆ. ಅದೆಂದರೆ ಬೇರೆಯವರ ಪತನದಲ್ಲಿ ಆನಂದವನ್ನು ಅನುಭವಿಸುವ ದುರ್ಗುಣ. ದೇವರ್ಷಿ ನಾರದರಿಗೆ ಅವರನ್ನು ರಕ್ಷಿಸುವುದಕ್ಕಾಗಿಯೇ ಶ್ರೀಮತಿಯ ಸ್ವಯಂವರ ಪ್ರಸಂಗದಲ್ಲಿ ಮಂಗನ ಮುಖವನ್ನು ಭಗವಂತ ವರವಾಗಿ ದಯಪಾಲಿಸಿದ್ದ! ರುದ್ರಗಣಗಳ ಕಣ್ಣುಗಳು ತೀಕ್ಷ್ಣವಾಗಿದ್ದವು. ಕಣ್ಣುಗಳು ತೀಕ್ಷ್ಣವಾಗಿದ್ದರೆ ಒಳ್ಳೆಯದೇ. ಆದರೂ ರುದ್ರಗಣಗಳಂತೆ ಆ ತೀಕ್ಷ್ಣತೆಯನ್ನು ಪರರ ಅಪಹಾಸ್ಯಕ್ಕಾಗಿ ಉಪಯೋಗಿಸುವುದು ಒಳ್ಳೆಯದಲ್ಲ. ಇತರರಿಗೆ ಕಷ್ಟ ನೀಡುವುದರಲ್ಲಿ ಆನಂದಿಸುವುದಾದರೆ ಭಗವಂತನು ನೀಡಿರುವ ಆ ಸಾಮರ್ಥ್ಯವನ್ನು ನಿಂದಿಸಿದಂತಲ್ಲವೇ? ಈ ರುದ್ರಗಣಗಳು ತಾನೇ ಸ್ವಯಂವರಕ್ಕೆ ಹೋದದ್ದು ಏತಕ್ಕೆ? ಅವರಿಗೆ ವಿವಾಹದ ಅವಶ್ಯಕತೆ ಇರಲಿಲ್ಲ. ನಾರದರ ದುರ್ದೆಶೆಯನ್ನು ನೋಡಿ ಹಾಸ್ಯ ಮಾಡಲಿಕ್ಕಾಗಿಯೇ ಅವರು ಸ್ವಯಂವರಕ್ಕೆ ಹೋಗಿದ್ದರು! ಇದು ಹೇಗಾಯಿತೆಂದರೆ, ನೀವು ಯಾರನ್ನಾದರೂ ಹಿಂಬಾಲಿಸಿ, ಅವರು ಜಾರಿ ಬಿದ್ದುದೇ ಆದರೆ ಕೈ ತಟ್ಟಿ ಸಂತೋಷಿಸಿದಂತೆ. ಕೊನೆಗೆ ಭಗವಂತನೇ ಬಂದು ನಿಂತಾಗ ಆ ಸುಂದರಿ ವಿಶ್ವಮೋಹಿನಿ ಮಾಯೆ ಆತನ ಕೊರಳಿಗೆ ಜಯಮಾಲೆಯನ್ನು ಹಾಕುತ್ತಾಳೆ. ಯಾವಾಗ ಭಗವಂತನು ವಿಶ್ವಮೋಹಿನಿಯನ್ನು ಕರೆದುಕೊಂಡು ಹೊರಟುಹೋಗುತ್ತಾನೊ, ಕೂಡಲೇ ರುದ್ರಗಣಗಳು ಆತಂಕಗೊಂಡ ನಾರದರಿಗೆ ನಗುತ್ತ ಹೇಳುತ್ತಾರೆ,

ತಬ ಹರಗನ ಬೋಲೇ ಮುಸುಕಾರ!
ನಿಜ ಮುಖ ಮುಕುರ ಬಿಲೋಕಹು ಜಾಈ (೪'-೩)

"ಹೋಗಿ ಕನ್ನಡಿಯಲ್ಲಿ ನಿಮ್ಮ ಮುಖ ನೋಡಿಕೊಳ್ಳಿ." ಕನ್ನಡಿಯು ಎಷ್ಟು ವಿಚಿತ್ರ ವಸ್ತುವೆಂದರೆ ಮನುಷ್ಯನಿಗೆ ಅದಕ್ಕಿಂತ

ಹೆಚ್ಚಾಗಿ ಯಾವುದೂ ಪ್ರಿಯವಲ್ಲ. ಪ್ರತಿ ವ್ಯಕ್ತಿಯೂ ಕನ್ನಡಿಯಲ್ಲಿ ತನ್ನನ್ನು ನೋಡಿಕೊಳ್ಳುತ್ತಾನೆ. ಆಶ್ಚರ್ಯವೆಂದರೆ ತಾನಾಗಿ ನೋಡಿಕೊಂಡರೆ ಆನಂದಿಸುವವನು, ಬೇರೆಯವರು ನೋಡಿ ಕೊಳ್ಳಲು ಹೇಳಿದರೆ ಕೋಪಗೊಳ್ಳುವನು. ಸ್ವಯಂವರದಲ್ಲಿ ನಾರದರ ಮುಖದ ಮೇಲೆ ಕಾಮದ ಆವೇಶ ತೋರುತ್ತಿತ್ತು. ರುದ್ರಗಣಗಳು ನಾರದರ ಮುಖ ಮಂಗನಂತಿದೆ ಎಂದು ಕುಚೋದ್ಯ ಮಾಡಿ, ಅಪಹಾಸ್ಯ ಮಾಡಿದರು. ನಾರದರು ಅವರನ್ನು ಶಪಿಸಿದರು, "ಹೋಗಿ ರಾಕ್ಷಸರಾಗಿರಿ! ಬೇರೆಯವರ ಪತನದಲ್ಲಿ ಆನಂದಿತರಾಗುವುದು ರಾಕ್ಷಸ ಪ್ರವೃತ್ತಿಯ ಚಿಹ್ನೆ."

ರಾಜ ಪ್ರತಾಪಭಾನುವೂ ರಾವಣನಾಗಿದ್ದನೆಂದು ಹೇಳುವರು. ರಾಜ ಪ್ರತಾಪಭಾನುವು ಸತ್ಯಕೇತುವಿನ ಮಗ ಮತ್ತು ಅವನ ಪತನವು ಕಾಲಕೇತುವಿನಿಂದಾಗಿ ಆಯಿತು. ಸತ್ಯಕೇತು ಮತ್ತು ಕಾಲಕೇತುಗಳೆಂದರೆ ಜೀವನದ ಎರಡು ದರ್ಶನಗಳು. ಸತ್ಯಕೇತು ತನ್ನ ವಿಚಾರಧಾರೆಯಲ್ಲಿ ಸ್ಥಿರತೆಯನ್ನು ಹೊಂದಿದ್ದು, ಜೀವನದಲ್ಲಿ ಕೆಲವು ಸಿದ್ಧಾಂತಗಳ ಆಧಾರದ ಮೇಲೆ ಜೀವನವನ್ನು ನಡೆಸಬೇಕೆಂಬ ಧ್ಯೇಯವುಳ್ಳವನು. ಕಾಲಕೇತು ಎಂದರೆ ಅವಕಾಶಗಳಿಗಾಗಿ ಅರಸುತ್ತ ಯಾವಾಗ ಯಾವುದರಲ್ಲಿ ಲಾಭವಾಗುವುದೋ, ಆಗ ಅದರಿಂದ ತಮ್ಮ ಸ್ವಾರ್ಥವನ್ನು ಸಾಧಿಸುವ ಸಮಯಸಾಧಕರು. ಕೇತು ಎಂದರೆ ಧ್ವಜ. ಸತ್ಯಕೇತು ಸತ್ಯದ ಧ್ವಜ. ಕಾಲಕೇತು ಎಂದರೆ ಕಾಲಕ್ಕೆ ತಕ್ಕಂತೆ ಅನುಕೂಲವನ್ನು ಪಡೆಯುವ ಧ್ವಜ.

ಒಮ್ಮೆ ರಾಜ ಪ್ರತಾಪಭಾನು ವನಕ್ಕೆ ಬೇಟೆಗೆ ಹೋದ. ಅವನು ಬೇಟೆಯಲ್ಲಿ ಯಶಸ್ವಿಯಾಗಿ ಸಾಯಂಕಾಲ ಹಿಂತಿರುಗುತ್ತಿದ್ದಾಗ ಒಂದು ಕಾಡುಹಂದಿ ಕಂಡುಬಂದಿತು. ಅದರ ಹಿಂದೆಯೇ ಬೆನ್ನಟ್ಟಿ ಹೋದ. ಇದೇ ಲೋಭ! ಗೋಸ್ವಾಮಿಜಿಯವರು ವಿನಯ ಪತ್ರಿಕೆಯಲ್ಲಿ ಹೇಳುತ್ತಾರೆ: **ಲೋಭ ಸೂಕರ ರೂಪ** ಲೋಭದ ಕಾಡುಹಂದಿಯು ಮುಂದೆ ಬಂತು ಮತ್ತು ಪ್ರತಾಪಭಾನು ಅದನ್ನು ಹಿಂಬಾಲಿಸಿದ. ಆ ಕಾಡುಹಂದಿ ಯಾರು? ಕಾಲಕೇತುವು ಚಿನ್ನದ ಹಂದಿಯ ರೂಪವನ್ನು ಧರಿಸಿ ಬಂದಿದ್ದ. ಪ್ರತಾಪಭಾನು ಅದರಿಂದ ಮೋಸಗೊಂಡ ಎಂಬುದೇ ವಿಚಿತ್ರ. ಯಾವಾಗ ಅವನು ರಾವಣನಾಗುತ್ತಾನೋ ರಾಮನನ್ನು ಮೋಸಪಡಿಸಲು ಚಿನ್ನದ ಜಿಂಕೆಯನ್ನು ಕರೆದುಕೊಂಡು ಬರುತ್ತಾನೆ! ಈ ಮೋಸದ ಚಕ್ರವು ಹೀಗೆಯೇ ಪುನರಾವರ್ತನೆಗೊಳ್ಳುತ್ತಿರುತ್ತದೆ. ಯಾರಾದರೂ ನಮಗೆ ಖೋಟಾ ನಾಣ್ಯವನ್ನು ಕೊಟ್ಟರೆ ನಾವು ಕೂಡಾ ಅದನ್ನು ಬೇರೆಯವರ ತಲೆಗೆ ಕಟ್ಟಲು ಪ್ರಯತ್ನಿಸುತ್ತೇವೆ. ಪ್ರಯತ್ನಪೂರ್ವಕವಾಗಿ ಅದನ್ನು ಬಿಸಾಡಿದರೆ, ಮಾತ್ರ ಆಗ ಅಲ್ಲಿಗೇ ಕೆಡುಕು ನಾಶವಾಗುವುದು.

ಸತ್ಯಕೇತುವಿನ ಮಗ ಪ್ರತಾಪಭಾನು ಕಾಲಕೇತುರೂಪಿ ಹಂದಿಯ ಹಿಂದೆ ಓಡಿದ. ಸತ್ಯವನ್ನು ಪಾಲಿಸುವವನೂ ಕೂಡ ಪ್ರಲೋಭನೆ, ಲಾಭಗಳಿಗೆ ಸಿಲುಕಿ ಅವಸರವಾದಿಯಂತೆ ವರ್ತಿಸಿದರೆ ಆಗ ಅವನು ಜಯ ಪಡೆಯಲಾರನು. ಯಾರು ಜೀವನದಲ್ಲಿ ಸ್ವಲ್ಪವೇ ಆದರೂ ಅಸತ್ಯವನ್ನು ಆಶ್ರಯಿಸುತ್ತಾರೋ ಅವರ ಪತನವು ಶತಸ್ಸಿದ್ಧ.

ಈ ಕಥೆಗಳ ಅಭಿಪ್ರಾಯವೇನೆಂದರೆ ರಾವಣನು ದುಷ್ಟತನದ ಪ್ರತೀಕವಾಗಿದ್ದನು ಮತ್ತು ಪ್ರತಿಯೊಂದು ವ್ಯಕ್ತಿಯ ಜೀವನದಲ್ಲಿ ಇಂತಹ ಒಬ್ಬ ರಾವಣನ ಅಂಶಗಳನ್ನು ಗಮನಿಸಬಹುದು.

ಮೋಸಗಾರಿಕೆ ಎಲ್ಲ ಸಮಾಜಗಳಲ್ಲಿಯೂ ಇದೆ. ಅದನ್ನು ಅಲ್ಲಗಳೆಯಲಾಗದು. ಮಹಾಭಾರತದಲ್ಲಿಯೂ ಮೋಸ ಮಾಡುವ ಪ್ರಲೋಭನೆಗೆ ಬಲಿಯಾದ ಪ್ರಸಂಗವಿದೆ. ಅಲ್ಲಿ ಭೀಮ ಹೇಳಿದ್ದ, "ಅಶ್ವತ್ಥಾಮ ಕೊಲ್ಲಲ್ಪಟ್ಟನು." ಹಾಗೆ ಹೇಳಬೇಕಾದರೆ ಮೊದಲು ಅಶ್ವತ್ಥಾಮ ಎಂಬ ಆನೆಯನ್ನು ಕೊಂದಿದ್ದ. ಇದು ಸತ್ಯದ ಜೊತೆಗೆ ಅಸತ್ಯದ ಲೇಪನ. ಅಶ್ವತ್ಥಾಮ ಎಂಬ ಆನೆಯು ಕೊಲ್ಲಲ್ಪಟ್ಟಿತು ಎಂದು ಹೇಳಿದಾಗ ಭೀಮನಿಗೆ ಸಂತೋಷವಾಯಿತು. ಏಕೆಂದರೆ ತಾನು ಪೂರ್ತಿ ಸುಳ್ಳನ್ನು ಹೇಳಲಿಲ್ಲ ಎಂದು. ಅಂದರೆ ಸುಳ್ಳು ಪೂರ್ತಿ ಮತ್ತು ಅರ್ಧವೆಂಬಂತೆ! ಯುಧಿಷ್ಠಿರನು ಸತ್ಯಸಂಧ ಎಂದೇ ಪ್ರಸಿದ್ಧ. ಆದರೆ ಯಾವಾಗ ಅವನ ಎದುರಿಗೆ ಈ ಸಮಸ್ಯೆಯು ಬಂತೋ ಆಗ ಅವನು ಹೇಳುತ್ತಾನೆ "**ಅಶ್ವತ್ಥಾಮಾ ಹತಃ, ನರೋ ವಾ ಕುಂಜರೋ ವಾ**" "ಅಶ್ವತ್ಥಾಮ ಸತ್ತ. ಆದರೆ ಮನುಷ್ಯನೋ, ಆನೆಯೋ ಎಂದು ತಿಳಿಯದು." ಹೀಗೆ ಹೇಳಿದ ಯುಧಿಷ್ಠಿರನು ಯಾರಿಗೆ ಮೋಸ ಮಾಡಿದನು? ತನಗೋ ಇಲ್ಲ ಬೇರೆಯವರಿಗೋ? ಯಾವಾಗ ಅವನಿಗೆ ಅಶ್ವತ್ಥಾಮ ಎಂಬ ಆನೆ ಕೊಲ್ಲಲ್ಪಟ್ಟಿದೆ ಎಂಬುದು ಸರಿಯಾಗಿ ತಿಳಿದಿತ್ತೋ ಆಗ ಮನುಷ್ಯನೋ ಆನೆಯೋ ಎಂಬ ಹೇಳಿಕೆಯು ಪೂರ್ತಿ ಅಸತ್ಯವಾಗಿತ್ತು. ಆದರೆ ಆ ಸಂದರ್ಭದಲ್ಲಿ ಮೋಸಗೊಳಿಸಲು ಇಷ್ಟು ಅಗತ್ಯವಿತ್ತು. ಯಾವಾಗ ಮನುಷ್ಯನು ತನಗೆ ತಾನೇ ಮೋಸ ಮಾಡಿಕೊಳ್ಳುತ್ತಾನೋ ಆಗ ಕಾಲಕೇತುವಿಗೆ ಜಯಗಳಿಸಲು ಅವಕಾಶ ಸಿಗುತ್ತದೆ. ಯಾವಾಗ ನಮ್ಮ ಜೀವನದಲ್ಲಿ ಅಹಂಕಾರ, ಮಾತ್ಸರ್ಯ, ಪ್ರಲೋಭನೆ, ಸ್ವಾರ್ಥಗಳು ರಾವಣನ ರೂಪದಲ್ಲಿ ಬರುತ್ತವೋ ಆಗ ರಾಮನ ಅವಶ್ಯಕತೆ ಇರುತ್ತದೆ. ನಾವು ಎಚ್ಚೆತ್ತು ತಿದ್ದಿಕೊಳ್ಳಲು ತಯಾರಾಗಿದ್ದರೆ, ರಾಮನೂ ಅಗಣಿತ ರೂಪದಲ್ಲಿ ನಮ್ಮ ಬಳಿಗೆ ಬರಲು ಸಿದ್ಧನಿದ್ದಾನೆ. ನೀವು ಅವನನ್ನು ಕರೆಸಿಕೊಳ್ಳಬಾರದೆ ಎಂದು ತುಲಸೀದಾಸರು ಕೇಳುತ್ತಾರೆ.